**ಕರಗಲಿ ಧಗೆ ಹಬ್ಬಲಿ ನಗೆ**




ಗೋಚರಿಸುವಂತೆ ಪ್ಲ್ಯಾನ್ ರೆಡಿ ಮಾಡಿಸುವರು.

ಗಿರಿಜೆ ಸ್ನಾನಕ್ಕೆ ಹೊರಡುವ ಮುನ್ನ ಸೃಷ್ಟಿಸಿದ ಪುತ್ರ ಗಣೇಶ, ಬಾತ್‌ರೂಮಿನ ಬಾಗಿಲಿನಲ್ಲೇ ಪಿತನಿಗೆ 'ನೋ ಎಂಟ್ರಿ' ಬೋರ್ಡ್ ತೋರಿ ತನ್ನ ತಲೆಗೇ ಸಂಚಕಾರ ತಂದುಕೊಂಡ. ಮಗನ ರುಂಡವಿಲ್ಲದ ಮುಂಡವನ್ನು ಕಂಡು ಕುಸಿದು ಕುಳಿತ ಪತ್ನಿಯನ್ನು ಕಂಡ ಶಿವ ಉತ್ತರ ದಿಕ್ಕಿಗೆ ತಲೆಯಿರಿಸಿ ಮಲಗಿದ್ದ ಗಜನ ಶಿರವನ್ನು ತರಿಸಿ ಮಗನ ಶರೀರಕ್ಕೆ ಜೋಡಣೆ ಮಾಡಿದ. ಇದರಿಂದ ಗಣೇಶ ಗಜವದನನಾದರೆ, ಪುರಾಣದ ಈ ಕಥೆಯೇ ಇಂದಿನ ವೈದ್ಯಕೀಯ ಲೋಕದ ಅಂಗಜೋಡಣೆ ಪ್ರಕ್ರಿಯೆಗೂ ಸ್ಫೂರ್ತಿಯಾಯ್ತು. ಗಜನ ಶಿರದ ಬದಲು ಛೇದಿಸಲಾದ ಗಣೇಶನ ಶಿರವನ್ನೇ ಏಕೆ ಜೋಡಿಸಲಿಲ್ಲ ಎಂಬುದು ಇಂದಿಗೂ ಮಿಲಿಯನ್ ಡಾಲರ್ ಪ್ರಶ್ನೆ! ಇದರೊಂದಿಗೆ ಪಾರ್ವತಿಯ ಸ್ವಯಂ ಪುತ್ರ ಸೃಷ್ಟಿಯ ಪ್ರಕ್ರಿಯೆ, ಪುರುಷ ಸಂಪರ್ಕವಿಲ್ಲದೆಯೂ ಶಿಶುವನ್ನು ಪಡೆಯುವ ನೂತನ ಪರಿಕಲ್ಪನೆಗೆ ಪ್ರೇರಣೆಯಾಯ್ತು. ಆನೆಗೊದಗಿದ ದುರ್ಗತಿಯಿಂದ ಉತ್ತರ ದಿಕ್ಕಿಗೆ ತಲೆಯಿರಿಸಿ ಮಲಗುವುದು ವಾಸ್ತು ವಿಜ್ಞಾನದಲ್ಲೂ ನಿಷಿದ್ಧವಾಯ್ತು.

ಸಾಗರ ಪ್ರಯಾಣದ ಸಮಯದಲ್ಲಿ ಕಾರ್ಡಿನಲ್ ದಿಕ್ಕುಗಳನ್ನು ತಿಳಿಯಲು ನಾವಿಕರು ಬಳಸುತ್ತಿದ್ದ ದಿಕ್ಸೂಚಿಗಳು ಇಂದು ಮನೆಯ ಮುಖ್ಯ ದ್ವಾರವನ್ನು ಪರಿಶೀಲಿಸಲು ಬಳಕೆಯಾಗುತ್ತಿವೆ. ಹೆಣ್ಣು ನೋಡಲು ಹೊರಟವರು ಹೂವು ಹಣ್ಣಿನ ತಟ್ಟೆ ಕೊಂಡೊಯ್ದಂತೆ ಬಾಡಿಗೆ ಮನೆಯ ತಲಾಷಿನಲ್ಲಿರುವ ಮಂದಿ ದಿಕ್ಸೂಚಿಯನ್ನು ಕೊಂಡೊಯ್ಯುವ ಪರಿಪಾಟವಿದೆ. ಮೊಬೈಲ್‌ಗಳಲ್ಲಿ ಅಲಾರ್ಮ್ ಆ್ಯಪ್, ಕ್ಯಾಲ್ಕುಲೇಟರ್‌ಗಳಂತೆ ದಿಕ್ಸೂಚಿಗಳೂ ಇವೆ. ಅಂಗೈಯೊಳಗೇ ದಿಕ್ಕು ತಿಳಿಸುವ, ದಿಕ್ಕು ತಪ್ಪಿಸುವ, ದಿಕ್ಕೆಡಿಸುವ ಹತ್ತು ಹಲವು ಆ್ಯಪ್‌ಗಳು ಲಭ್ಯ. ಇವು ಶಬ್ದವೇಧಿ ವಿದ್ಯೆಯನ್ನೂ ಬೋಧಿಸಿ ಕೆಲವೊಮ್ಮೆ ಅಬ್‌ಸ್ಕಾಂಡ್ ಆದ ವ್ಯಕ್ತಿಯನ್ನು ಕುಳಿತಲ್ಲೇ ಟ್ರ್ಯಾಕ್ ಮಾಡಲು ಬಳಕೆಯಾಗುತ್ತವೆ.

ಗುಡಿಯಲ್ಲಿರುವ ದೇವರುಗಳೆಲ್ಲಾ ಪೂರ್ವಾಭಿಮುಖವಾಗಿ ನಿಂತರೆ ನವಗ್ರಹಗಳು ಮಾತ್ರ ಮುನಿದ ಮಡದಿ ಮಕ್ಕಳಂತೆ, ಕಣ್ಣಿನಾಸ್ಪತ್ರೆಗಳಲ್ಲಿ ಡ್ರಾಪ್ಸ್ ಹನಿಸಿಕೊಂಡವರಂತೆ ವಿವಿಧ ದಿಕ್ಕುಗಳಿಗೆ ಮುಖ ತಿರುಗಿಸಿ ಕುಳಿತಿರುತ್ತವೆ. ಹೆತ್ತವರ ಬದುಕಿನ ಮುಸ್ಸಂಜೆಯಲ್ಲಿ ದಿಕ್ಕಾಗಬೇಕಾದ ಮಕ್ಕಳಿಂದು ಭೌಗೋಳಿಕ ಗಡಿರೇಖೆಗಳನ್ನು ದಾಟಿ ವಿವಿಧ ದಿಕ್ಕುಗಳಿಗೆ ಚದುರಿಹೋಗಿದ್ದರೆ ಜೊತೆಯಲ್ಲೇ ಉಳಿದವರ ನಡುವೆಯೂ ಹೊಂದಾಣಿಕೆ ಸಮಸ್ಯೆ ತಲೆದೋರಿ ಮನೆಯೊಂದು ಮೂರು ಬಾಗಿಲಾಗಿದೆ. ಆಧುನಿಕ ಕೂಡು ಕುಟುಂಬದ ಪರಿಕಲ್ಪನೆಯಲ್ಲಿರುವ ಗಂಡ ಹೆಂಡತಿ ಎಂಬ ಎರಡೇ ಕ್ಯಾರೆಕ್ಟರ್‌ಗಳೂ ಪರಸ್ಪರ ಮಾರಿ ನೋಡಲೂ ಪುರಸೊತ್ತಿಲ್ಲದೆ ವಿಭಿನ್ನ ದಿಕ್ಕುಗಳಿಗೆ ತಿರುಗಿ ಮೊಬೈಲ್ ತೀಡುತ್ತಿವೆ. ಉತ್ತರ ಧ್ರುವದಿಂ... ದಕ್ಷಿಣ ಧ್ರುವಕೂ... ಬೀಸುತ್ತಿದ್ದ ಚುಂಬಕ ಗಾಳಿ ಸಂವಹನದ ಕೊರತೆಯಿಂದ ಹಿಮ್ಮೆಟ್ಟುತ್ತಿದೆ (ರಿಪೆಲ್). ಬದಲಾದ ಪರಿಸ್ಥಿತಿಯಲ್ಲೂ ದಿಕ್ ಚಕ್ರದ ನಿರಂತರತೆ ಮಾತ್ರ ಅಬಾಧಿತವಾಗಿ ಎಂದಿನಂತೆ ಚಲನಶೀಲವಾಗಿದೆ.